**CC 1759/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1759/2023

**ಸಿ ಡಬ್ಲ್ಯೂ** 8
**ಪಿ ಡಬ್ಲ್ಯೂಃ** 5

**ಸಾಕ್ಷಿಯ ಹೆಸರು - ರಮೇಶ್ ಪಟಗಿ**
**ತಂದೆಯ ಹೆಸರು - ಲೇಟ್ ಕೆ ಪಿ ಪಾಂಡುರಂಗ ರಾವ್**
**ವಯಸ್ಸು -** 62 **ವರ್ಷಗಳು**
**ಉದ್ಯೋಗ - ನಿವೃತ್ತ ಮುಖ್ಯ ಪೇದೆ**
**ವಾಸಸ್ಥಳ - ಕಮಲಾಪುರ**

**ಸಾಕ್ಷಿಯನ್ನು ದಿನಾಂಕಃ** 18-12-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **2022** ರಿಂದ **2024** ರವರೆಗೆ ಹಂಪಿ ಪ್ರವಾಸಿ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **15-14-2023** ರಂದು ನಾನು ಠಾಣೆ ಪ್ರಭಾರದಲ್ಲಿದ್ದಾಗ ಚಾಸಾ **-1** ರವರು ಠಾಣೆಗೆ ಹಾಜರಾಗಿ ಮಧ್ಯಾಹ್ನ **4.00** ಗಂಟೆಗೆ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ಸಂಖ್ಯೆ **12/2023** ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **4** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿಃ **4(ಎ)** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿಃ **5** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿಃ **5(ಎ)** ಎಂದು ಗುರುತಿಸಲಾಯಿತು.

ಚಾಸಾ **-1** ರವರು ವಶಕ್ಕೆ ಪಡೆದು ಹಾಜರುಪಡಿಸಿದ್ದ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ದಸ್ತಗಿರಿ ಮಾಡಿರುತ್ತೇನೆ. ಆತನ ಸ್ವಖುಷಿ ಹೇಳಿಕೆಯನ್ನು ಪಡೆನಿರುತ್ತೇನೆ ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಾಳಿಗೆ

ಸಹಕರಿಸಿದ್ದ ಚಾಸಾ -4 ರಿಂದ 6 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ -1 ರವರು ಹಾಜರುಪಡಿಸಿದ್ದ 90 ಎಂ ಎಲ್ ನ 58 ಟೆಟ್ರಾಪ್ಯಾಕ್ ಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ದಿಃ 02-05-2023 ರಂದು ಮಧ್ಯದ ಟೆಟ್ರಾ ಪ್ಯಾಕ್ ಗಳನ್ನು ಆರ್.ಎಫ್.ಎಸ್.ಎಲ್ ರಾಯಚೂರಿಗೆ ಪಿಸಿ 72 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಸದರಿಯವರು ದಿಃ 18-05-2023 ರಂದು ನೀಡಿದ್ದ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿ ವರದಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು 3(ಎ) ಎಂದು ಗುರುತಿಸಲಾಯಿತು. ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸಿಸುತ್ತೇನೆ. ಈದಿನ ಆರೋಪಿ ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರು ಇರುವುದಿಲ್ಲ. ಮುದ್ದೆಮಾಲು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಮುದ್ದೆ ಮಾಲು ಒಂದನ್ನು ನೋಡಿ ಗುರುತಿಸಿರುತ್ತಾರೆ.

ಕಚ್ಚಾ ನಕಾಶೆ ನೋಡಿ ಗುರುತಿಸಿದ್ದು, ನಿಪಿಃ 6 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು 6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದ**

ನಾನು ಪ್ರತಿಯೊಂದು ಟೆಟ್ರಾಪ್ಯಾಕ್ ಸಿರಿಯಲ್ ನಂಬರ್ ನೋಡಿರುತ್ತೇನೆ. ಮಧ್ಯದ ಅಂಗಡಿಗಳಲ್ಲಿ ಮುದ್ದೆಮಾಲು 1 ರಂತಹ ಪೌಚ್ ಗಳು ಸಿಗುತ್ತವೆ ಅಂದರೆ ಸರಿ . ಮಧ್ಯದ ಅಂಗಡಿಗಳಿಗೆ ಅಬಕಾರಿ ಇಲಾಖೆಗಳಿಂದಲೇ ಮಧ್ಯದ ಪೌಚ್ ಗಳು ಸರಬರಾಜು ಆಗುತ್ತವೆ ಅಂದರೆ ಸರಿ. ಮುದ್ದೆಮಾಲುಗಳನ್ನು ಅಬಕಾರಿ ಇಲಾಖೆಯಿಂದ ಯಾವ ಅಂಗಡಿಗಳಿಗೆ ಸರಬರಾಜು ಮಾಡಲಾಗಿತ್ತು ಎಂದು ನಾನು ತನಿಖೆ ಮಾಡಿಲ್ಲ. ಸ್ವತ್ತು ಪಟ್ಟಿ ಯಲ್ಲಿ ಎಲ್ಲಾ ಪೌಚ್ ಗಳ ಕ್ರಮ ಸಂಖ್ಯೆ ಯನ್ನು

ನಮೂದು ಮಾಡಿರುತ್ತೇನೆ. ಮಧ್ಯದ ಅಂಗಡಿಯ ಬಳಿ ಖಾಲಿ ಪೌಚ್ ಗಳು ಸಹ ಸಿಗುತ್ತವೆ ಅಂದರೆ ಸರಿ . ನಾನು ಯಾವುದೇ ತನಿಖೆ ಮಾಡದೇ ಖಾಲಿ ಪೌಚ್ ಗಳನ್ನು ತೆಗೆದುಕೊಂಡು ಹೋಗಿ ಆರೋಪಿಯನ್ನು ವಿನಾಕಾರಣ ಪ್ರಕರಣದಲ್ಲಿ ಸಿಲುಕಿ ಹಾಕಿರುತ್ತೇನೆ ಅಂದರೆ ಸರಿಯಲ್ಲ. ಚಾಸಾ -1 ರವರು ಆರೋಪಿಯನ್ನು ಮತ್ತು ಮುದ್ದೆಮಾಲನ್ನು ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಯಾವುದೇ ಸ್ವಖುಷಿ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ಕಚ್ಚಾ ನಕಾಶೆ ತಯಾರಿಸಿದೆ ಅಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.